ಅ) ಈ ಎರಡು ಭಾಗಗಳನ್ನು ಮೈದಾನ ಮತ್ತು ಪಾರ್ಕ್‌ಗಳಾಗಿ ಮಾಡಬೇಕೆಂದು ಹಲವಾರು ವರ್ಷಗಳಿಂದ ಶಾಸಕರೂ, ಅಲ್ಲಿನ ಜನರು ಒತ್ತಾಯಿಸುತ್ತಿರುವುದು ನಿಜವೇ?

ಆ) ಈ ತಡೆಯಾಜ್ಞೆಯನ್ನು ಖಾಲಿ ಮಾಡಲು ನಗರಪಾಲಿಕೆಯವರಾಗಲೀ ಅಥವಾ ಸರ್ಕಾರದವರಾಗಲೀ ಕೈಗೊಂಡಿರುವ ಕ್ರಮಗಳೇನು?

ಈ) ಕೆರೆ ಅಂಗಳವನ್ನು ತಮ್ಮದಾಗಿಯೇ ಮಾಡಿಕೊಳ್ಳಬೇಕೆಂದು ಕೆಲವು ಸ್ವಾರ್ಥ ಸಾಧಕರು ಮಹಾನಗರಪಾಲಿಕೆಯ ಕೆಲವು ಅಧಿಕಾರಿಗಳೂ ಶಾಮೀಲಾಗಿರುವುದು ತಿಳಿದಿದೆಯೇ?

ಉ) ಜನತೆಯ ಹೇಳಿಕೆಗಳನ್ನು ಈಡೇರಿಸಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ನಿಜ.

ಇ) ಈ ದಾವೆಯಲ್ಲಿ ಮಹಾನಗರ ಪಾಲಿಕೆಯು ತಮ್ಮ ನಿಲುವಿನ ಸಮರ್ಥನೆ ಮಾಡಿ ಹೇಳಿಕೆ (ಡಿಫೆನ್ಸ್ ಸ್ಟೇಟ್‌ಮೆಂಟ್)ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ ತಡೆಯಾಜ್ಞೆಯನ್ನು ತೆರವು ಮಾಡಲು ಅರ್ಜಿ ಸಲ್ಲಿಸಿತ್ತು. ಆದರೆ ನ್ಯಾಯಾಲಯವು ತನ್ನ ಆಜ್ಞೆಯನ್ನು ಪೂರ್ಣಾಟು ಮಾಡಿ ಮಹಾನಗರ ಪಾಲಿಕೆಯವರು ಈ ಪ್ರದೇಶದಲ್ಲಿರುವ ರಸ್ತೆಗಳನ್ನು ರಿಪೇರಿ ಮಾಡಲು ಮಾತ್ರ ಅವಕಾಶ ಮಾಡಿಕೊಟ್ಟಿರುತ್ತಾರೆ.

ಈ) ಗಮನಕ್ಕೆ ಬಂದಿಲ್ಲ.

ಉ) ದಾವೆಯು ನ್ಯಾಯಾಲಯದಲ್ಲಿ ಮುಗಿದ ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಅಗ್ರಾಹಾರ ದಾಸರಹಳ್ಳಿ ಬಗ್ಗೆ

*೫೫೩. ಶ್ರೀ ಎಂ. ಎಸ್ ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜಾಜಿನಗರ ಅಗ್ರಹಾರ ದಾಸರಹಳ್ಳಿ ಕೆರೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯವರು ಕೊಳಚೆ ನೀರನ್ನು ಬಿಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಆ) ಇದರಿಂದಾಗಿ ಸೊಳ್ಳೆಯ ಕಾಟ ಜನರಿಗೆ ಅನಾರೋಗ್ಯ ಇತ್ಯಾದಿಗಳಾಗುತ್ತಿರುವುದರ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿಲ್ಲವೆ ?

ಇ) ಈ ಕೆರೆಯ ಕೊಳಚೆ ನೀರನ್ನು ಹೊರಕ್ಕೆ ತೆಗೆದು ಈ ಖಾಲಿ ಜಾಗದಲ್ಲಿ ಆಟದ ಮೈದಾನ ಮತ್ತು ಪಾರ್ಕ್‌ಗಳನ್ನು ಮಾಡಬೇಕೆಂದು ಅನೇಕ ವರ್ಷಗಳಿಂದ ಜನ ಮತ್ತು ಶಾಸಕರು ಕೇಳುತ್ತಿಲ್ಲವೆ ?

ಈ) ಬೆಂಗಳೂರು ಮಹಾನಗರ ಪಾಲಿಕೆಯವರು ಕೆರೆಯ ನೀರನ್ನು ಹೊರಕ್ಕೆ ತೆಗೆಯಬೇಕೆಂಬ ನಿರ್ಧಾರಕ್ಕೆ ಬಂದು ಆದೇಶವನ್ನೇನಾದರೂ ನೀಡಿದ್ದಾರೆಯೇ ?

ಉ) ಮೇಲಿನ ಕೇಳಿಕೆಯನ್ನು ಈಡೇರಿಸಲು ಸರ್ಕಾರದವರು ಕೈಗೊಳ್ಳುವ ಕಾರ್ಯಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ಬೆಂಗಳೂರು ಮಹಾನಗರ ಪಾಲಿಕೆಗೆ ದೂರುಗಳು ಬಂದಿದೆ.

ಇ) ಹೌದು. ಮನವಿಗಳು ಬೆಂಗಳೂರು ಮಹಾನಗರ ಪಾಲಿಕೆಗೆ ಬಂದಿರುತ್ತೆ.

ಈ) ಮಹಾನಗರ ಪಾಲಿಕೆಯು ಅಗತ್ಯ ವ್ಯವಸ್ಥೆಯನ್ನು ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದ್ದು ಕೊಳಚೆ ನೀರನ್ನು ಹೊರ ಹೋಗಲು ಕ್ರಮ ತೆಗೆದು ಕೊಂಡಿದೆ.

ಉ) ತಕ್ಷಣಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯು ಆರೋಗ್ಯ ಇಲಾಖೆಯವರು ಕ್ರಮಬದ್ಧ ರೀತಿಯಲ್ಲಿ ರಾಸಾಯನಿಕ ವಸ್ತುಗಳನ್ನು ಸಿಂಪಡಿಸುವುದನ್ನು ಮತ್ತು ಕೆರೆಯಲ್ಲಿನ ಜೊಂಡನ್ನು ತೆಗೆಯುವ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಇದಲ್ಲದೆ ಈಗ ವಿಗ್ರಹಾರ ದಾಸರಹಳ್ಳಿ ಕೆರೆಗೆ ಹರಿದು ಬರುತ್ತಿರುವ ಕೊಳಚೆ ನೀರನ್ನು ಬೇರೆ ಕಡೆಗೆ ಹಾಯಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಹಾಕುವ ಸಬ್ ಮೈನ್‌ಗೆ ತೆಗೆದುಕೊಳ್ಳಲಾಗುತ್ತಿದೆ.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ನಾನು ಈ ಕೆಳಕಂಡ ಅರ್ಜಿಯನ್ನು ಸಭೆಯ ಮುಂದೆ ಅರ್ಪಿಸುತ್ತೇನೆ.

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ತಾಯಲ್ಲೂರು ಹೋಬಳಿ ಯಡಹಳ್ಳಿ ಗ್ರಾಮದಲ್ಲಿ ಗೃಹ ನಿರ್ಮಾಣ ಯೋಜನೆಯಲ್ಲಿ ಹರಿಜನ ಕಾಲೋನಿಯನ್ನು ನಿರ್ಮಿಸುವ ಬಗ್ಗೆ.

ಆ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ತಾಯಲ್ಲೂರು ಹೋಬಳಿ ರಾಮಚಂದ್ರಪುರ ಗ್ರಾಮದ ನಮ್ಮ ವರ್ಗದ ಜನರಿಗೆ ಗೃಹ ನಿರ್ಮಾಣ ಯೋಜನೆಯಲ್ಲಿ ಕಾಲೋನಿಯನ್ನು ಕಲ್ಪಿಸಿ ಕೊಡುವ ಬಗ್ಗೆ, ಹಾಗೂ

ಇ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ತಾಯಲೂರು ಹೋಬಳಿ ರಾಮಚಂದ್ರಪುರ ಗ್ರಾಮದ ರಸ್ತೆಗೆ ಇಲ್ಲಿ ಇಕಿ ಪಿಚ್ಚಿಂಗ್ ಚರಂಡಿ ನಿರ್ಮಿಸುವ ಬಗ್ಗೆ.

ಶ್ರೀ ವೀರಯ್ಯ ಸಾಮ್ರಿ ಮಹಾಲಿಂಗಯ್ಯ.—ಮಾನ್ಯ ಅಧ್ಯಕ್ಷರೇ ನಾನು ಈ ಕೆಳಕಂಡ ಅರ್ಜಿಗಳನ್ನು ಸಭೆಯ ಮುಂದೆ ಇಡಬಯಸುತ್ತೇನೆ.

ಅ) ಗುಲ್ಬರ್ಗಾ ಜಿಲ್ಲೆ ಚಿಂಚೋಳ್ಳಿ ತಾಲ್ಲೂಕಿನ ತುಮಕುಂಟ ಗ್ರಾಮಕ್ಕೆ ಕುಡಿಯುವ ನಳದ ನೀರಿನ ಸೌಲಭ್ಯದ ಬಗ್ಗೆ

ಆ) ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಕೋಟಾ ಗ್ರಾಮಕ್ಕೆ ಚಂದನಕೇರದಿಂದ ಏನಾಪುರ ಮಾರ್ಗವಾಗಿ ರಸ್ತೆಯನ್ನು ನಿರ್ಮಿಸುವ ಬಗ್ಗೆ.

ಇ) ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಚಂದನಕೇರ ಗ್ರಾಮಕ್ಕೆ ಕುಡಿಯುವ ನಳದ ನೀರಿನ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಹಾಗೂ

ಈ) ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಚಂದನಕೇರ ಗ್ರಾಮದ ಕಲ್ಲರೊಡ್ಡಿ ತಾಂಡಾ, ಊನಿತಾಂಡಾ, ಶಿರಸನ ಬೋಗಡಿ ತಾಂಡಾ ಹಾಗೂ ಮುಂದಗೋಳ ತಾಂಡಾಗಳಿಗೆ ರಸ್ತೆ ಕುಡಿಯುವ ನೀರು ಹಾಗೂ ವಿದ್ಯುತ್ ಸೌಲಭ್ಯದ ಬಗ್ಗೆ.

ಅಧ್ಯಕ್ಷರು.—ಸಭೆಗೆ ಅರ್ಜಿಗಳನ್ನು ಒಪ್ಪಿಸಲಾಯಿತು.

ಸದಸ್ಯರ ಗೈರು ಹಾಜರಿಗೆ ಅನುಮತಿ

ಅಧ್ಯಕ್ಷರು.—ವಿಧಾನ ಸಭಾ ಸದಸ್ಯರಾದ ಶ್ರೀ ವೇದಾಂತ ಹೆಮ್ಮಿಗೆಯವರು ದಿನಾಂಕ ೩–೩–೧೯೮೭ ರಿಂದ ೧೨–೩–೧೯೮೭ರ ವರೆಗೆ ವಿಧಾನ ಸಭಾ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ಬರೆದಿರುತ್ತಾರೆ.